ಕಾಲೇಜು ಶಿಕ್ಷಣ ಇಲಾಖೆ

ಸಹಯೋಗ


# AKSHARASURYA

Peer-Reviewed, Multi lingual E-Journal.

E-ISSN: 2583-620X Volume – 04, Issue – 05, August 2024. Special Issue.


ಮತ್ತು

## ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು

(B++ ನ್ಯಾಕ್ ಮಾನ್ಯತೆ ಪಡೆದಿದೆ)
ಬೈರಾಪುರ, ಟಿ. ನರಸೀಪುರ, ಮೈಸೂರು.

# ಮೈಸೂರು ಸಂಸ್ಥಾನದಿಂದ ಕರ್ನಾಟಕದೆಡೆಗೆ

ಸಂಪುಟ – 2

(ಕರ್ನಾಟಕ ಸರ್ಕಾರ ಮತ್ತು ಕಾಲೇಜು ಶಿಕ್ಷಣ ಇಲಾಖೆಯ ಸಹಯೋಗದಲ್ಲಿ 2023–24 ನೇ ಸಾಲಿನಲ್ಲಿ ನಡೆಸಲಾದ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣದಲ್ಲಿ ಮಂಡನೆಯಾದ ಆಯ್ದ ಲೇಖನಗಳು.)

# ಸಂಪಾದಕ ಮಂಡಳಿ


**ಅಧ್ಯಕ್ಷರು:**

**ಪ್ರೊ. ವಿ. ವಿ. ಜಗದೀಶ್**
ಪ್ರಾಂಶುಪಾಲರು
ಮ.ಸ.ಪ್ರ.ದ.ಕಾ, ಬೈರಾಪುರ.

**ಸಂಚಾಲಕರು:**

**ಪ್ರೊ. ಬಿ. ಪಿ. ಇಂದಿರಾ**
ಮುಖ್ಯಸ್ಥರು
ಇತಿಹಾಸ ವಿಭಾಗ
ಮತ್ತು IQAC ಸಂಚಾಲಕರು
ಮ.ಸ.ಪ್ರ.ದ.ಕಾ, ಬೈರಾಪುರ.

**ಸಲಹಾ ಸಮಿತಿ ಸದಸ್ಯರು:**

**ಡಾ. ವೈ. ಎಚ್. ನಾಯಕ್ ವಾಡಿ**
ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು
ಇತಿಹಾಸ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ, ಮೈಸೂರು.

**ಡಾ. ಎಂ. ಕೆ. ಮಾಧವಿ**
ಸಹ ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಸ.ಪ್ರ.ದ.ಕಾ. ತಿ.ನರಸೀಪುರ.

**ಸಂಪಾದಕರು:**

**ಡಾ. ಡಿ. ಪರುಷೋತ್ತಮ**
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಮ.ಸ.ಪ್ರ.ದ.ಕಾ, ಬೈರಾಪುರ.

# Foreword:

It is with great pleasure and enthusiasm that I introduce this compilation of articles presented during the National seminar on "Backward Class Movement and Women Empowerment in the Princely state of Mysore- in the backdrop of Archival records." This seminar served as a platform for scholars, researchers, and enthusiasts to delve into the rich history, culture, and heritage of Karnataka, with a particular focus on the Mysore region.

The articles within this volume encapsulate the diverse perspectives, profound insights, and rigorous scholarship that were shared and discussed during the seminar. Each contribution offers a unique lens through which to explore the multifaceted dimensions of Karnataka's past, present, and future trajectory.

From exploring the architectural marvels of Mysore to unravelling the socio-cultural dynamics that have shaped the region over centuries, these articles provide invaluable contributions to our understanding of Karnataka's rich tapestry of traditions, languages, art forms, and belief systems.

I would like to extend my heartfelt gratitude to all the authors whose dedication, expertise, and passion have made this compilation possible. Their commitment to advancing knowledge and fostering dialogue is evident in the depth and breadth of the topics covered in this volume.

I am grateful to Sri Siddaramaiah honourable Chief Minister of Karnataka and President of our College Department Council and Department Collegiate and Technical Education in organising this National seminar, in bringing together scholars and enthusiasts from across the country to celebrate and explore the cultural heritage of Karnataka.

May this book serve as a source of inspiration, enlightenment, and scholarly exchange for years to come, enriching our understanding of Karnataka's glorious past and informing our endeavours to shape its vibrant future.

**Warm regards,**

**Dr. Jagadish V. V.**
Principal
Government First grade college For Women
Byrapura, T.N.Pura
Mysore. 571124

# ಸಂಪಾದಕರ ನುಡಿ

ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಆಶಯದಂತೆ, ಅವರ ಪ್ರೋತ್ಸಾಹ, ಸೂಕ್ತ ಮಾರ್ಗದರ್ಶನದಲ್ಲಿ ನಮ್ಮ ಕಾಲೇಜು ಶೈಕ್ಷಣಿಕ ಉನ್ನತಿಯನ್ನು ಸಾಧಿಸುತ್ತಿದೆ. ಅವರ ಸದಾಶಯದಂತೆ ಹಿಂದುಳಿದ ವರ್ಗ ಮತ್ತು ಮಹಿಳೆಯರನ್ನು ಕುರಿತಾದ ಕಾರ್ಯಕ್ರಮವನ್ನು ರೂಪಿಸಿ, ರಾಜ್ಯ ಸರ್ಕಾರದ ಧನ ಪ್ರೋತ್ಸಾಹದಿಂದ ಮತ್ತು ಕಾಲೇಜು ಶಿಕ್ಷಣ ಇಲಾಖೆಯ ಅನುಮತಿ ಪಡೆದು, ನಮ್ಮ ಕಾಲೇಜಿನಲ್ಲಿ ಕಳೆದ 5 ಮತ್ತು 6 ರ ಡಿಸೆಂಬರ್ 2023 ರಲ್ಲಿ ಎರಡು ದಿನಗಳ ಕಾಲ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. "ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ವರ್ಗಗಳ ಚಳುವಳಿ ಮತ್ತು ಮಹಿಳಾ ಸಬಲೀಕರಣ–ಚಾರಿತ್ರಿಕ ದಾಖಲೆಗಳ ಹಿನ್ನೆಲೆಯಲ್ಲಿ" ವಿಷಯವನ್ನು ಒಳಗೊಂಡಂತೆ ಅನ್ಯ ವಿಷಯಜ್ಞಾನ ಶಾಖೆಗಳಿಂದ ಕೂಡಿದ ಬಹುಶಿಸ್ತೀಯ ಹಿನ್ನೆಲೆಯಲ್ಲಿ 20ಕ್ಕೂ ಹೆಚ್ಚು ಬೇರೆ ಬೇರೆ ವಿಷಯ ಕೇಂದ್ರಿತವಾದ ನೆಲೆಯಲ್ಲಿ ಪತ್ರಿಕೆಗಳನ್ನು ಆಹ್ವಾನ ಮಾಡಲಾಗಿತ್ತು. ಸುಮಾರು 82 ಜನ ವಿಷಯ ಮಂಡಕರು ಸಂಶೋಧನಾ ಪತ್ರಿಕೆಗಳನ್ನು ಮಂಡನೆ ಮಾಡಿದರು. ಮೈಸೂರು ಸಂಸ್ಥಾನದಿಂದ ಕರ್ನಾಟಕ ರಾಜ್ಯ ನಿರ್ಮಾಣದ ಕಡೆಗಿನ ಚಾರಿತ್ರಿಕವಾದ ಬೆಳವಣಿಗೆಗೆ ಪೂರಕವಾಗಿತ್ತು ಪತ್ರಿಕೆಗಳು.

ನಮ್ಮ ವಿಚಾರ ಸಂಕಿರಣದ ಪ್ರಮುಖ ಆಶಯವೇ ಮೈಸೂರು ಸಂಸ್ಥಾನದಲ್ಲಿ ನಡೆದ ಸಾಮಾಜಿಕ ಚಳುವಳಿಗಳಲ್ಲಿ ಹಿಂದುಳಿದ ವರ್ಗಗಳ ಚಳವಳಿಯೊಂದು ಹೊಸ ಮೈಲಿಗಲ್ಲಾಗಿದ್ದದನ್ನು ದಾಖಲಿಸುವುದಾಗಿತ್ತು. ಈ ಚಳವಳಿಯ ಪ್ರಮುಖ ಉದ್ದೇಶ ಹಿಂದುಳಿದ ವರ್ಗಗಳಿಗೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ನ್ಯಾಯವನ್ನು ಒದಗಿಸುವುದಾಗಿತ್ತು. 1917ರಲ್ಲಿ ಜಸ್ಟೀಸ್ ಮಿಲ್ಲರ್ ಸಮಿತಿಯನ್ನು ಹಿಂದುಳಿದ ವರ್ಗಗಳ ಏಳಿಗೆಯ ಬಗ್ಗೆ ವರದಿ ನೀಡಲು ನೇಮಿಸಲಾಯಿತು. ಮಿಲ್ಲರ್ ಸಮಿತಿಯ ವರದಿಯ ಆಧಾರದ ಮೇಲೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸರ್ಕಾರಿ ಕೆಲಸಗಳಲ್ಲಿ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಮೀಸಲಾತಿ ನೀಡುವ ಐತಿಹಾಸಿಕ ತೀರ್ಮಾನ ಕೈಗೊಂಡರು. ಮೀಸಲಾತಿಯನ್ನು ವಿರೋಧಿಸಿ ಮೆರಿಟ್ ಆಧಾರವನ್ನು ಪ್ರತಿಪಾದಿಸಿ ತಮ್ಮ ದಿವಾನ ಹುದ್ದೆಗೆ ರಾಜೀನಾಮೆಯನ್ನು ಸರ್. ಎಂ. ವಿಶ್ವೇಶ್ವರಯ್ಯನವರು ನೀಡಿದ್ದು ಮತ್ತೊಂದು ಪ್ರಮುಖ ಅಂಶವಾಗಿದೆ. ಹಿಂದುಳಿದ ವರ್ಗಗಳ ಚಳವಳಿಯ ವಿವಿಧ ಆಯಾಮಗಳನ್ನು ಬೆಳಕಿಗೆ ತರುವ ಉದ್ದೇಶದಿಂದ ಈ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು.

ನಮ್ಮ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಹಿಳಾ ಸಬಲೀಕರಣದ ವಿಷಯವನ್ನು ಪ್ರತಿಪಾದಿಸುವುದು ಔಚಿತ್ಯ ಪೂರ್ಣವಾದ ಕಾರ್ಯವೆಂದು ಭಾವಿಸಿ, ಮೈಸೂರು ಸಂಸ್ಥಾನದಲ್ಲಿ ಹಲವಾರು ಮಹಿಳಾ ಪರ ಶಾಸನಗಳು ಜಾರಿಗೆ ಬಂದಿರುವ ಬಗ್ಗೆ ಚರ್ಚೆ ಮಾಡುವ ಉದ್ದೇಶದಿಂದಲೇ ಈ ವಿಷಯವನ್ನು ಆಯ್ಕೆ ಮಾಡಿಕೊಂಡೆವು. ಪ್ರಜಾಪ್ರತಿನಿಧಿ ಸಭೆ ಹಾಗೂ ಶಾಸಕಾಂಗ ಸಭೆಗಳಲ್ಲಿ ಮಹಿಳಾ ಪ್ರತಿನಿಧಿಗಳ ಸಕ್ರಿಯ ಭಾಗವಹಿಸುವಿಕೆ, ಮಹಿಳಾ ಶಿಕ್ಷಣದ ಆರಂಭ–ಬೆಳವಣಿಗೆ ಮುಂತಾದ ವಿಷಯಗಳು ಅಕಾಡೆಮಿಕ್ ವಲಯವನ್ನು ಹೆಚ್ಚಿನ ಅಧ್ಯಯನಕ್ಕಾಗಿ ಆಕರ್ಷಿಸುತ್ತಿವೆ. ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳಾ ನಾಯಕಿಯರ ಪಾತ್ರ ಉದಾ:

ಯಶೋಧರಾ ದಾಸಪ್ಪ, ಟಿ.ಸುನಂದಮ್ಮ, ಸುಬ್ಬಮ್ಮ ಜೋಯಿಸ್ ಮುಂತಾದವರು ಹಾಗೂ ಪತ್ರಿಕಾರಂಗದಲ್ಲಿ ಮಹಿಳೆಯರ ಪ್ರತಿನಿಧಿತ್ವ ಇವೆಲ್ಲವೂ ಅಧ್ಯಯನ ಆಸಕ್ತಿಯನ್ನು ಹೆಚ್ಚಿಸುವ ವಿಷಯಗಳಾಗಿವೆ. ಹಾಗಾಗಿ ನಮ್ಮ ರಾಷ್ಟ್ರೀಯ ವಿಚಾರ ಸಂಕಿರಣವು ಹಿಂದುಳಿದ ವರ್ಗಗಳ ಚಳವಳಿ ಹಾಗೂ ಮಹಿಳಾ ಸಬಲೀಕರಣವನ್ನು ಕುರಿತಾದ ಸಂಶೋಧನಾ ಪ್ರಬಂಧಗಳನ್ನು ಮಂಡನೆ ಮಾಡಲು ಲೇಖಕರು, ಚಿಂತಕರು, ವಿಷಯ ತಜ್ಞರನ್ನು ಆಹ್ವಾನಿಸಲಾಗಿತ್ತು. ಹಲವು ಪತ್ರಿಕಾ ಮಂಡಕರ ಮನವಿಯ ಮೇರೆಗೆ, ನಾವು ಈ ಪುಸ್ತಕದ ಮುದ್ರಣ ಕಾರ್ಯಕ್ಕೆ ಮುಂದಾದೆವು. ISSN ಪ್ರಕಟಣೆಯಲ್ಲಿ ಆಯ್ದ ಎಲ್ಲಾ ಲೇಖನಗಳನ್ನು ಪರಿಶೀಲಿಸಿ, ಅವುಗಳ ಗುಣಮಟ್ಟ ಮತ್ತು ವಸ್ತು ವಿಷಯಗಳನ್ನು ಕೇಂದ್ರಿಕರಿಸಿ ಈ ಪುಸ್ತಕವನ್ನು ಸಂಪಾದಕ ಮಂಡಳಿಯ ಮುಂದೆ ಚರ್ಚೆ ಮಾಡಿ, ಅವರ ಅನುಮತಿ ಪಡೆದು, ಅವರ ಸಲಹೆ ಸೂಚನೆಯಂತೆ ಈ ಪುಸ್ತಕ ಸಿದ್ಧವಾಗಿದೆ.

ಸುಮಾರು 30 ಆಯ್ದ ಲೇಖನಗಳನ್ನು ಈ ಪುಸ್ತಕದಲ್ಲಿ ಪ್ರಕಟಿಸಲಾಗುತ್ತಿದೆ. ಇಲ್ಲಿ ಹಲವು ನೆಲೆಗಳ ಆಶಯದಲ್ಲಿ ಲೇಖನವನ್ನು ಆಯ್ಕೆ ಮಾಡಲಾಗಿವೆ. ಟಿಪ್ಪುಸುಲ್ತಾನ್ ಕಾಲದಿಂದ ಆರಂಭಗೊಂಡು ಇಂದಿನ ಕರ್ನಾಟಕದ ಹೆಸರು, ರಾಜ್ಯ ನಿರ್ಮಾಣದ ಹಂತದಲ್ಲಿ ಹಲವು ಬೆಳವಣಿಗೆಯನ್ನು ಸಾಹಿತ್ಯ, ಚರಿತ್ರೆ, ಅರ್ಥಶಾಸ್ತ್ರ, ವೈಜ್ಞಾನಿಕ ಹಿನ್ನೆಲೆಯ ಆಧಾರಗಳ ಸಹಿತವಾದ ಲೇಖನಗಳನ್ನು ಒಳಗೊಂಡ ಕೃತಿ ಇದಾಗಿದೆ. ಸಬಲೀಕರಣದ ನೆಲೆಯಲ್ಲಿ ಸ್ತ್ರೀ ಮತ್ತು ತೃತೀಯ ಲಿಂಗದವರಿಗೆ ಸಂಬಂಧಿಸಿದ ಲೇಖನವನ್ನು ಈ ಕೃತಿಯು ಒಳಗೊಂಡಿದೆ. ಹಿಂದುಳಿದ ವರ್ಗದ ಚಳವಳಿ ಕುರಿತಾದ ಲೇಖನಗಳು ಹಾಗೂ ಇಂದಿನ ವರ್ತಮಾನದಲ್ಲಿ ಕನ್ನಡ ಭಾಷೆಯು ಚಾರಿತ್ರಿಕ ಹಿನ್ನಲೆಯ ಜೊತೆಗೆ ಹೊಸ ತಂತ್ರಜ್ಞಾನದ ಜೊತೆ ಅನುಸಂಧಾನ ಮಾಡಿಕೊಂಡು ಬೆಳೆಯಬೇಕಾದ ಜರೂರು ಇರುವ ಲೇಖನವನ್ನು ಈ ಪುಸ್ತಕ ಒಳಗೊಂಡಿದೆ.

ನಮ್ಮ ಕಾಲೇಜಿನ ಸಹಯೋಗದೊಂದಿಗೆ ಈ ಪುಸ್ತಕವನ್ನು ಅಂದವಾಗಿ ವಿನ್ಯಾಸಗೊಳಿಸಿ ಅಚ್ಚುಕಟ್ಟಾಗಿ ಮುದ್ರಿಸಿ, ಅಂತರ್ ಜಾಲ ತಾಣದಲ್ಲೂ ಪ್ರಕಟ ಮಾಡಿ ಕೊಟ್ಟಿರುವ 'ಅಕ್ಷರಸೂರ್ಯ' ಪತ್ರಿಕೆಯ ಸಂಪಾದಕರಿಗೂ, ಸಂಘಟಕ ಮಿತ್ರರನ್ನು ಸ್ಮರಿಸುತ್ತ, ಇದಕ್ಕೆ ಸಂಪೂರ್ಣವಾದ ಸಹಕಾರ ನೀಡಿದ ನಮ್ಮ ಪ್ರಾಂಶುಪಾಲರಾದ ಪ್ರೊ. ವಿ.ವಿ.ಜಗದೀಶ್ ಅವರಿಗೆ ಮತ್ತು ಸಂಚಾಲಕರಾದ ಪ್ರೊ. ಬಿ.ಪಿ ಇಂದಿರಾ ಅವರಿಗೆ ನನ್ನ ವೈಯುಕ್ತಿಕವಾದ ನಮನಗಳು. ವಿಶೇಷವಾಗಿ ಪ್ರೊ. ನಾಯಕ್ ವಾಡಿ ವೈ. ಎಚ್., ಡಾ. ಎಂ.ಕೆ. ಮಾಧವಿ ಮತ್ತು ನಮ್ಮ ಕಾಲೇಜಿನ ಎಲ್ಲಾ ಅಧ್ಯಾಪಕರು, ಗ್ರಂಥಪಾಲಕರು, ಕಛೇರಿ ಸಿಬ್ಬಂದಿ ವರ್ಗದವರನ್ನು ಹಾಗೂ ನಲ್ಮೆಯ ವಿದ್ಯಾರ್ಥಿನಿಯರನ್ನು ಗೌರವ ಪೂರ್ಣವಾಗಿ ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ.

**ಡಾ. ಡಿ. ಪುರುಷೋತ್ತಮ**
ಕನ್ನಡ ಸಹ ಪ್ರಧ್ಯಾಪಕರು ಮತ್ತು
ಕೃತಿ ಸಂಪಾದಕರು
ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಬೈರಾಪುರ.

# CONTENTS

## KANNADA


1. ಶಾಸನೋಕ್ತ ವೀರಗಲ್ಲಿನಲ್ಲಿ ವೃತ್ತಿ ಸಮುದಾಯಗಳು 01–05
~ ಅನುಪಮ ಸಿ.

2. ವರ್ತಮಾನದ ಕನ್ನಡಿಯಲ್ಲಿ ಕನಕ ದರ್ಶನ 06–16
~ ಚಿಕ್ಕಮಗಳೂರು ಗಣೇಶ

3. ರವೀಂದ್ರನಾಥ ಠಾಗೋರ್: ಜೀವನ, ಸಾಹಿತ್ಯ ಮತ್ತು ಸಂಘರ್ಷ 17–23
~ ಆಯ್. ಬಿ. ಸಾತಿಹಾಳ

4. ಸಾಳಿ ವೆಂಕಣ್ಣಯ್ಯರ 'ಗಿರಿಜಾಕಲ್ಯಾಣ' ಯಕ್ಷಗಾನ ಕಾವ್ಯ ಒಂದು ಪಕ್ಷಿನೋಟ 24–34
~ ಎಂ. ಮಹಾದೇವಪ್ರಭು

5. ಕರ್ನಾಟಕದ ಜಾನಪದ ನಂಬಿಕೆಗಳು 35–42
~ ಜೆ. ರಾಜ ಗುಂಡಾಪುರ

6. ರಂಗಕಲಾವಿದೆಯರು ಮತ್ತು ಚಳವಳಿಗಳು (ಮೈಸೂರು ಸಂಸ್ಥಾನ ಮತ್ತು ಅಖಂಡ ಕರ್ನಾಟಕವನ್ನು ಅನುಲಕ್ಷಿಸಿ) 43–52
~ ರವಿ ಎನ್. ಸಿ.

7. ಶ್ರೀರಂಗಪಟ್ಟಣ ತಾಲ್ಲೂಕಿನ ಪ್ರಮುಖ ದೇವಿ ಶಿಲ್ಪಗಳು 53–59
~ ಸತೀಶ್ ಪಿ.

8. ಸ್ವಾತಂತ್ರ್ಯ ಹೋರಾಟ ಸಂದರ್ಭದ ನವೋದಯ ಕವನಗಳಲ್ಲಿ ಗಾಂಧೀಜಿ ಚಿತ್ರಣ 60–69
~ ವಿಜಯ

9. ಸಮಾನತೆಯ ಹರಿಕಾರ ಬಸವಣ್ಣ 70–74
~ ಗಾಯತ್ರಿ ಉಪ್ಪಾರ

10. ಚಾರಿತ್ರಿಕ ಹಿನ್ನೆಲೆಯಲ್ಲಿ ಕನ್ನಡ ಭಾಷೆ ಮತ್ತು ಲಿಪಿಯ ಹುಟ್ಟು 75–84
~ ಭವ್ಯ ಆರ್.

## ENGLISH

11. **Heroic Women in The Freedom Struggle in The History of Karnataka** 85-92
~ Jayanna B. R.

12. **Land Revenue System in The State of Mysore: A Review** 93-99
~ Kavitha D.

13. **A worth remembering Pepper Queen: Chēnnabhairādēvi** 100-107
~ Pooja Naik

14. **Contribution of The Mysore Province to Literary Translation works in Kannada and English Language** 108-111
~ Prasad N.

15. **Banni Pooja (Shami Vriksha Pooja) and its Significance for Mysore Dasara Festival** 112-118
~ SUMA V. & RAVIKUMAR